# ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: | 291(329) |
| ಮಾನ್ಯ ಸದಸ್ಯರ ಹೆಸರು: | ಶ್ರೀ ಬಸವನಗೌಡ ಬಾದರ್ಲಿ (ವಿಧಾನಸಭೆಯಿಂದ ಚುನಾಯಿತರಾದವರು) |
| ಉತ್ತರಿಸುವ ಸಚಿವರು: | ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು |
| ಉತ್ತರಿಸಬೇಕಾದ ದಿನಾಂಕ: | 10.03.2025. |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ಕಲ್ಯಾಣ-ಕರ್ನಾಟಕದ ಭಾಗದ ಶಾಲೆಗಳಲ್ಲಿ ಮಂಜೂರಾಗಿರುವ ಶಿಕ್ಷಕರ ಹುದ್ದೆಗಳೆಷ್ಟು; ಇಲ್ಲಿ ಕಾರ್ಯನಿರ್ವಹಿಸುತ್ತಿರುವ ಶಿಕ್ಷಕರೆಷ್ಟು ಹಾಗೂ ಖಾಲಿ ಇರುವ ಶಿಕ್ಷಕರ ಹುದ್ದೆಗಳ ಸಂಖ್ಯೆ ಎಷ್ಟು; ಹೊಸ ನೇಮಕಾತಿಯ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ;</td><td>ಕಲ್ಯಾಣ-ಕರ್ನಾಟಕ ಭಾಗದ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢ ಶಾಲೆಗಳಿಗೆ ಮಂಜೂರಾದ, ಕಾರ್ಯನಿರತ ಮತ್ತು ಖಾಲಿಯಿರುವ ಶಿಕ್ಷಕರ ಹುದ್ದೆಗಳ ವಿವರಗಳು ಈ ಕೆಳಕಂಡಂತಿದೆ:-
<table>
<tr><th>ಶಾಲೆಗಳ ವಿಧ</th><th>ಮಂಜೂರಾದ ಹುದ್ದೆಗಳು</th><th>ಕಾರ್ಯನಿರತ ಹುದ್ದೆಗಳು</th><th>ಖಾಲಿ ಹುದ್ದೆಗಳು</th></tr>
<tr><td>ಪ್ರಾಥಮಿಕ ಶಾಲೆ</td><td>45431</td><td>28157</td><td>17274</td></tr>
<tr><td>ಪ್ರೌಢ ಶಾಲೆ</td><td>11793</td><td>7686</td><td>4107</td></tr>
</table>
1. ಸರ್ಕಾರದ ಆದೇಶ ಸಂಖ್ಯೆ: ಇಪಿ 230 ಪಿಬಿಎಸ್ 2024, ದಿನಾಂಕ:07.10.2024 ರನ್ವಯ ಕಲ್ಯಾಣ ಕರ್ನಾಟಕ ಪ್ರದೇಶದ 07 ಜಿಲ್ಲೆಗಳಲ್ಲಿ ಖಾಲಿಯಿರುವ ಪ್ರಾಥಮಿಕ ಶಾಲೆಗಳ 4882 ಹಾಗೂ ಪ್ರೌಢಶಾಲೆಗಳ 385 ಹುದ್ದೆಗಳನ್ನು ಭರ್ತಿ ಮಾಡಲು ಅನುಮತಿ ನೀಡಲಾಗಿರುತ್ತದೆ.<br>
2. ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯ ಸುತ್ತೋಲೆ ಸಂಖ್ಯೆ ಸಿಆಸುಇ 388 ಸೆನೆನಿ 2024, ದಿನಾಂಕ: 25.11.2024 ರಲ್ಲಿ ದಿನಾಂಕ 28.10.2024 ರಂದು ನಡೆದ ಸಚಿವ ಸಂಪುಟ ಸಭೆಯಲ್ಲಿ ತೆಗೆದುಕೊಂಡ ನಿರ್ಣಯದಂತೆ ರಾಜ್ಯ ಸಿವಿಲ್ ಸೇವೆಗಳಲ್ಲಿನ ಮೀಸಲಾತಿ ಅನ್ವಯವಾಗುವ ವೃಂದಗಳಲ್ಲಿನ ಹುದ್ದೆಗಳಿಗೆ ನೇರ ನೇಮಕಾತಿ</td></tr>
</table>

| | | |
|---|---|---|
| | | ಮಾಡಲು ಹೊಸದಾಗಿ ಯಾವುದೇ ಅಧಿಸೂಚನೆಯನ್ನು ತಕ್ಷಣದಿಂದ ಜಾರಿಗೆ ಬರುವಂತೆ ಮುಂದಿನ ಆದೇಶದವರೆಗೂ ಹೊರಡಿಸಬಾರದೆಂದು ಸೂಚಿಸಲಾಗಿರುತ್ತದೆ. ಈ ಹಿನ್ನೆಲೆಯಲ್ಲಿ ನೇಮಕಾತಿ ಅಧಿಸೂಚನೆ ಹೊರಡಿಸಿರುವುದಿಲ್ಲ. |
| ಆ) | ಕಲ್ಯಾಣ-ಕರ್ನಾಟಕ ಭಾಗದ ವಿದ್ಯಾರ್ಥಿಗಳ "ವಿಜ್ಞಾನ ವಿಭಾಗದ" ಅಭ್ಯಾಸಕ್ಕಾಗಿ ವಲಯಕ್ಕೊಂದು "ವಿಜ್ಞಾನ ಕಾಲೇಜನ್ನು ಸ್ಥಾಪಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ | ಇಂತಹ ಯಾವುದೇ ಪ್ರಸ್ತಾವನೆಯು ಸರ್ಕಾರದ ಮುಂದಿರುವುದಿಲ್ಲ. |
| ಇ) | ಈ ಭಾಗದ ಶಾಲಾ ಕಾಲೇಜುಗಳಲ್ಲಿ ಮೂಲಸೌಕರ್ಯಗಳಾದ ಕುಡಿಯುವ ನೀರು, ಹೈಟೆಕ್ ಶೌಚಾಲಯ ಉತ್ತಮವಾದ ಗ್ರಂಥಾಲಯ ಹಾಗೂ ಸಾರಿಗೆ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ, ಸರ್ಕಾರ ಯಾವ ಕ್ರಮಗಳನ್ನು ಕೈಗೊಂಡಿದೆ? | ಕಲ್ಯಾಣ-ಕರ್ನಾಟಕ ಭಾಗದ ಶಾಲಾ ಕಾಲೇಜುಗಳಲ್ಲಿ ಮೂಲಸೌಕರ್ಯಗಳಾದ ಕುಡಿಯುವ ನೀರು, ಹೈಟೆಕ್ ಶೌಚಾಲಯ ಉತ್ತಮವಾದ ಗ್ರಂಥಾಲಯ ಹಾಗೂ ಸಾರಿಗೆ ಸೌಕರ್ಯ ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರದಿಂದ ಕೈಗೊಂಡಿರುವ ಕ್ರಮಗಳ ವಿವರವನ್ನು **ಅನುಬಂಧ**ದಲ್ಲಿರಿಸಿದೆ. |

**ಇಪಿ 13 ಪಿಎಂಎ 2025**

**(ಎಸ್. ಮಧು ಬಂಗಾರಪ್ಪ)**
ಶಾಲಾ ಶಿಕ್ಷಣ ಮತ್ತು ಸಾಕ್ಷರತಾ ಸಚಿವರು

ಸರ್ಕಾರಿ ಶಾಲೆಗಳಿಗೆ ಸಂಬಂಧಿಸಿದಂತೆ ಅನುಬಂಧ

ಅನುಬಂಧ

| ಕ್ರಸಂ | ಮೂಲ ಸೌಕರ್ಯಗಳ ಹೆಸರು | ಮನರೇಗಾ ಯೋಜನೆ | ಕೆಕೆಆರ್‌ಡಿಬಿ |
|---|---|---|---|
| 1 | ಕುಡಿಯುವ ನೀರು | – | 2023-24 ನೇ ಸಾಲಿನಲ್ಲಿ 'ಅಕ್ಷರ ಆವಿಷ್ಕಾರ' ಯೋಜನೆ ಅಡಿಯಲ್ಲಿ 66 ಕಾಮಗಾರಿಗಳಿಗೆ ರೂ. 410.73 ಲಕ್ಷ ನಿಗದಿಯಾಗಿದ್ದು 63 ಕಾಮಗಾರಿಗಳು ಪ್ರಗತಿಯಲ್ಲಿದ್ದು, 03 ಕಾಮಗಾರಿಗಳು ಪೂರ್ಣಗೊಂಡಿದೆ |
| 2 | ಪ್ರತ್ಯೇಕ ಶೌಚಾಲಯ | 2022-23 & 2024-25 ನೇ ಸಾಲಿಗಾಗಿ ರಾಜ್ಯ ಸರ್ಕಾರದಿಂದ ಮನರೇಗಾ ಒಗ್ಗೂಡಿಸುವಿಕೆ 1882 ಶೌಚಾಲಯ ನಿರ್ಮಾಣಕ್ಕಾಗಿ ರೂ. 4621.01 ಲಕ್ಷ ನಿಗದಿಯಾಗಿದ್ದು 1479 ಶೌಚಾಲಯ ನಿರ್ಮಾಣ ಕೈಗೆತ್ತಿಕೊಳ್ಳಲಾಗಿದೆ, ಇದರಲ್ಲಿ 284 ಶೌಚಾಲಯ ನಿರ್ಮಾಣ ಪೂರ್ಣಗೊಂಡಿದೆ. 900 ಪ್ರಗತಿಯಲ್ಲಿದೆ ಮತ್ತು 295 ಇನ್ನೂ ಪ್ರಾರಂಭವಾಗಿಲ್ಲ | 2023-24 ನೇ ಸಾಲಿನಲ್ಲಿ 'ಅಕ್ಷರ ಆವಿಷ್ಕಾರ' ಯೋಜನೆ ಅಡಿಯಲ್ಲಿ 78 ಕಾಮಗಾರಿಗಳಿಗೆ ರೂ. 1630.37 ಲಕ್ಷ ನಿಗದಿಯಾಗಿದ್ದು, 71 ಕಾಮಗಾರಿಗಳು ಪ್ರಗತಿಯಲ್ಲಿದ್ದು, 07 ಕಾಮಗಾರಿಗಳು ಪೂರ್ಣಗೊಂಡಿದೆ |
| 3 | ಗ್ರಂಥಾಲಯ | – | 2023-24 ನೇ ಸಾಲಿನಲ್ಲಿ 'ಅಕ್ಷರ ಆವಿಷ್ಕಾರ' ಯೋಜನೆ ಅಡಿಯಲ್ಲಿ 10 ಕಾಮಗಾರಿಗಳಿಗೆ ರೂ. 64.02 ಲಕ್ಷ ನಿಗದಿಯಾಗಿದ್ದು, 08 ಕಾಮಗಾರಿಗಳು ಪ್ರಗತಿಯಲ್ಲಿದ್ದು, 02 ಕಾಮಗಾರಿಗಳು ಪೂರ್ಣಗೊಂಡಿದೆ |

ನಿರ್ದೇಶಕರು
ಅಪರ ಆಯುಕ್ತರ ಕಛೇರಿ
ಶಾಲಾ ಶಿಕ್ಷಣ ಇಲಾಖೆ, ಕಲಬುರಗಿ

## ಸರ್ಕಾರಿ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ

| ಕ್ರ. ಸಂ. | ಜಿಲ್ಲೆ | ಕಾಲೇಜಿನ ಹೆಸರು | ಕುಡಿಯುವ ನೀರು ಹೈಟೆಕ್ ಶೌಚಾಲಯ | ಅನುಮೋದಿತ ಮೊತ್ತ |
|---|---|---|---|---|
| 1. | ರಾಯಚೂರು | ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಸಿಂಧನೂರು | 1 | 8.50 |
| | | ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಸ್ಟೇಷನ್ ರಸ್ತೆ, ರಾಯಚೂರು. | 1 | 8.50 |
| | | ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, PWD CAMP ಸಿಂಧನೂರು. | 1 | 8.50 |
| | | ಸರ್ಕಾರಿ ಪದವಿ ಪೂರ್ವ ಕಾಲೇಜು, ಲಿಂಗಸೂಗೂರು. | 1 | 8.50 |
| | | ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಲೇಜು, ದೇವದುರ್ಗ | 1 | 8.50 |
| | | ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಮಾನ್ವಿ. | 1 | 8.50 |
| 2. | ಕೊಪ್ಪಳ | ಸರ್ಕಾರಿ ಪದವಿ ಪೂರ್ವ ಕಾಲೇಜು, ಹನುಮಸಾಗರ, ಕುಷ್ಟಗಿ ತಾಲ್ಲೂಕು. | 1 | 8.50 |
| | | ಸರ್ಕಾರಿ ಪದವಿ ಪೂರ್ವ ಕಾಲೇಜು, ಮಂಗಳೂರು, ಕುಕನೂರು ತಾಲ್ಲೂಕು. | 1 | 8.50 |
| | | ಬಾಲಕಿಯರ SMNM ಸರ್ಕಾರಿ ಪದವಿ ಪೂರ್ವ ಕಾಲೇಜು, ಗಂಗಾವತಿ. | 1 | 8.50 |
| | | ಸರ್ಕಾರಿ ಪದವಿ ಪೂರ್ವ ಕಾಲೇಜು, ನವಲಿ. | 1 | 8.50 |
| 3 | ಬಳ್ಳಾರಿ | SM ಬಾಲಕರ ಸರ್ಕಾರಿ ಪದವಿ ಪೂರ್ವ ಕಾಲೇಜು, ಕಂಪ್ಲಿ | 1 | 8.50 |
| | | ಬಾಲಕಿಯರ ಸರ್ಕಾರಿ ಪದವಿ ಪೂರ್ವ ಕಾಲೇಜು, ಕಂಪ್ಲಿ. | 1 | 8.50 |
| | | ಸರ್ಕಾರಿ ಪದವಿ ಪೂರ್ವ ಕಾಲೇಜು, ಎಮ್ಮಿಗನೂರು. | 1 | 8.50 |
| | | ಸರ್ಕಾರಿ ಪದವಿ ಪೂರ್ವ ಕಾಲೇಜು, ಕುರುಗೋಡು. | 1 | 8.50 |
| 4 | ವಿಜಯನಗರ | ಸರ್ಕಾರಿ ಪದವಿ ಪೂರ್ವ ಕಾಲೇಜು, ಹರಪನಹಳ್ಳಿ | 1 | 8.50 |
| | | ಸರ್ಕಾರಿ ಪದವಿ ಪೂರ್ವ ಕಾಲೇಜು ಲಕ್ಷ್ಮೀಪುರ. | 1 | 8.50 |